**<u>ಗಮನಕ್ಕೆ</u> :** ಅರ್ಜಿ ಶುಲ್ಕವನ್ನು ಪಾವತಿಸುವವರು ಬ್ಯಾಂಕ್‌ನ ಕಛೇರಿಯ ವೇಳೆಯಲ್ಲಿ ಮಾತ್ರ ಪಾವತಿಸತಕ್ಕದ್ದು.
**<u>ಸೂಚನೆ:</u>** ಆನ್‌ಲೈನ್ ಮುಖಾಂತರ ಮಾತ್ರ ಅರ್ಜಿಗಳನ್ನು ಸ್ವೀಕರಿಸಲಾಗುವುದು. ಪೊಲೀಸ್ ಇಲಾಖೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ನೀಡಲಾಗಿರುವ ಅರ್ಜಿಯನ್ನು ಮಾತ್ರ ಭರ್ತಿ ಮಾಡಿ ನಿಗದಿತ ದಿನಾಂಕದೊಳಗೆ ಸಲ್ಲಿಸಲಾಗುವ ಅರ್ಜಿಯನ್ನು ಪರಿಗಣಿಸಲಾಗುವುದು.

ಸಮಾಲೋಚಕರು / ಹಿರಿಯ ಸಮಾಲೋಚಕರು ಹುದ್ದೆಗಳ ನೇಮಕಾತಿಗೆ ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿರುತ್ತದೆ.

**ಎ) ವಯೋಮಿತಿ :**

ಅರ್ಜಿಯನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಂದರೆ ದಿನಾಂಕ: 27.04.2017ಕ್ಕೆ ಈ ಕೆಳಕಂಡ ವಯಸ್ಸು ಮೀರಿರಬಾರದು.

ಸಮಾಲೋಚಕರಿಗೆ – ಗರಿಷ್ಠ 33 ವರ್ಷ

ಹಿರಿಯ ಸಮಾಲೋಚಕರಿಗೆ – ಗರಿಷ್ಠ 35 ವರ್ಷ

**ಬಿ) ವಿದ್ಯಾರ್ಹತೆ :**

ಸಮಾಲೋಚಕರಿಗೆ – M.Sc / M.A Psychology, Preference should be given to M.Phil in Clinical Psychology (Recognized by Rehabilitation Council of India).

ಹಿರಿಯ ಸಮಾಲೋಚಕರಿಗೆ – M.Phil in Clinical Psychology (Recognized by Rehabilitation Council of India) with the minimum experience of one year in the field of Counselling or Psychological Assessment.

**ಆಯ್ಕೆ ವಿಧಾನ :**

**ಎ) ಲಿಖಿತ ಪರೀಕ್ಷೆ :**

ಸಮಾಲೋಚಕರಿಗೆ ಮತ್ತು ಹಿರಿಯ ಸಮಾಲೋಚಕರಿಗೆ : –

**ಪತ್ರಿಕೆ–1 :**

ಅಭ್ಯರ್ಥಿಗಳ ಕನ್ನಡ ಭಾಷಾ ಜ್ಞಾನ ಪರೀಕ್ಷಿಸಲು ಈ ಪ್ರಶ್ನೆ ಪತ್ರಿಕೆಯಲ್ಲಿ ಕನ್ನಡ ಭಾಷೆಯಿಂದ ಆಂಗ್ಲ ಭಾಷೆಗೆ ಮತ್ತು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸಬೇಕಾಗಿರತ್ತದೆ. ಕನ್ನಡ ಭಾಷೆಯಿಂದ ಆಂಗ್ಲ ಭಾಷೆಗೆ ಭಾಷಾಂತರಿಸಲು 12½ ಅಂಕಗಳನ್ನು ಮತ್ತು ಆಂಗ್ಲ ಭಾಷೆಯಿಂದ ಕನ್ನಡ ಭಾಷೆಗೆ ಭಾಷಾಂತರಿಸಲು 12½ ಅಂಕಗಳನ್ನು ನಿಗಧಿಗೊಳಿಸಲಾಗಿರುತ್ತದೆ. ಸದರಿ ಪತ್ರಿಕೆಯಲ್ಲಿ ಕನಿಷ್ಠ 10 ಅಂಕಗಳನ್ನು ಪಡೆದಿದ್ದಲ್ಲಿ ಮಾತ್ರ ಪತ್ರಿಕೆ–2ನ್ನು ಮೌಲ್ಯಮಾಪನ ಮಾಡಲಾಗುವುದು. ಪರೀಕ್ಷೆಯ ಅವಧಿಯು ಒಂದು ಗಂಟೆಯದಾಗಿರುತ್ತದೆ. ಪತ್ರಿಕೆ–1 ಕೇವಲ Qualifying nature ಆಗಿರುತ್ತದೆ. ಈ ಪತ್ರಿಕೆಯಲ್ಲಿ ಪಡೆಯುವ ಅಂಕಗಳನ್ನು ಅರ್ಹತಾ ಪಟ್ಟಿ ತಯಾರಿಸಲು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.

**ಪತ್ರಿಕೆ-2 :**

ಲಿಖಿತ ಪರೀಕ್ಷೆಯು ವಸ್ತುನಿಷ್ಠ (ಆಬ್ಜೆಕ್ಟೀವ್) ಮಾದರಿಯದಾಗಿದ್ದು, ಬಹುವಿಧ ಆಯ್ಕೆ ಉತ್ತರಗಳ ಲಿಖಿತ ಪರೀಕ್ಷೆ ಇರುತ್ತದೆ. ಲಿಖಿತ ಪರೀಕ್ಷೆಯಲ್ಲಿ 50 ಪ್ರಶ್ನೆಗಳನ್ನು ಕೇಳಲಾಗುವುದು. ಪ್ರತಿ ಸರಿ ಉತ್ತರಕ್ಕೆ 2.00 ಅಂಕಗಳನ್ನು ನೀಡಲಾಗುವುದು ಮತ್ತು ಪ್ರತಿ ತಪ್ಪು ಉತ್ತರಕ್ಕೆ 0.25 ಅಂಕಗಳನ್ನು ಕಳೆಯಲಾಗುವುದು. ಪರೀಕ್ಷೆಯ ಅವಧಿಯು ಒಂದು ಗಂಟೆಯದಾಗಿರುತ್ತದೆ. ಸದರಿ ಪ್ರಶ್ನೆ ಪತ್ರಿಕೆಯು ಒಟ್ಟು 100 ಅಂಕಗಳದ್ದಾಗಿರುತ್ತದೆ.

**ಬಿ) ಮೌಖಿಕ ಪರೀಕ್ಷೆ :**

10 ಅಂಕಗಳಿಗೆ ಮೌಖಿಕ ಪರೀಕ್ಷೆಯನ್ನು ನಡೆಸಲಾಗುವುದು. ಪ್ರಶ್ನೆ ಪತ್ರಿಕೆ-2 ರಲ್ಲಿ ಗಳಿಸಿದ ಅಂಕಗಳ ಆಧಾರದ ಅರ್ಹತೆಯ ಮೇರೆಗೆ 1 : 3 ಅನುಪಾತದಲ್ಲಿ ಅಭ್ಯರ್ಥಿಗಳನ್ನು ಮೌಖಿಕ ಪರೀಕ್ಷೆಗೆ ಕರೆಯಲಾಗುವುದು.

**<u>ಇತರೆ ಅರ್ಹತಾ ಷರತ್ತುಗಳು ಮತ್ತು ಸೂಚನೆಗಳು</u> :**

a) ಭಾರತೀಯ ನಾಗರೀಕನಾಗಿರತಕ್ಕದ್ದು.

b) ಅಭ್ಯರ್ಥಿಯು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತನಾಗಿರಬೇಕು ಮತ್ತು ಅವರ ನೇಮಕಾತಿಯ ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನತೆಯಿಂದ ಮುಕ್ತರಾಗಿರಬೇಕು.

c) ಅಭ್ಯರ್ಥಿಯು ನಿಗದಿಪಡಿಸಿರುವ ವಯೋಮಿತಿ ಮತ್ತು ವಿದ್ಯಾರ್ಹತೆಯನ್ನು ಹೊಂದಿರಬೇಕು. ನಿಗದಿಪಡಿಸಲಾಗಿರುವ ವಯೋಮಿತಿ ಮತ್ತು ವಿದ್ಯಾರ್ಹತೆಯನ್ನು ಹೊಂದಿರುವುದಾಗಿ ಅಭ್ಯರ್ಥಿಯು ಸುಳ್ಳು ಮಾಹಿತಿ ನೀಡಿ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಿ ಆಯ್ಕೆಗೊಂಡ ನಂತರ ನೇಮಕಾತಿ ಸಮಿತಿಗೆ ಅಭ್ಯರ್ಥಿಯು ನಿಗದಿಪಡಿಸಲಾಗಿರುವ ವಯೋಮಿತಿ ಮತ್ತು ವಿದ್ಯಾರ್ಹತೆಯನ್ನು ಹೊಂದಿರುವುದಿಲ್ಲವೆಂದು ತಿಳಿದುಬಂದಲ್ಲಿ ಅಂತಹ ಅಭ್ಯರ್ಥಿಯನ್ನು ಯಾವುದೇ ಮುನ್ಸೂಚನೆ ನೀಡದೆ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗುವುದು.

d) ಪ್ರಶ್ನೆ ಪತ್ರಿಕೆಯಲ್ಲಿ ಯಾವುದಾದರೂ ಮುದ್ರಣ ದೋಷವಾದಲ್ಲಿ ಅದನ್ನು ತಕ್ಷಣ ಕೊಠಡಿಯ ಪರಿವೀಕ್ಷಕರ ಗಮನಕ್ಕೆ ತಂದು ಸರಿಯಾದ ಪ್ರಶ್ನೆ ಪತ್ರಿಕೆ ಪಡೆದುಕೊಂಡು ಉತ್ತರವನ್ನು ಬರೆಯಬೇಕು. ಅಲ್ಲದೇ ಇದರ ಬಗ್ಗೆ ಪರೀಕ್ಷೆ ಮುಗಿದ ನಂತರ ನೇಮಕಾತಿ ಸಮಿತಿಗೆ ಸದರಿ ವಿಷಯದ ಬಗ್ಗೆ ತಿಳಿಸಿದಲ್ಲಿ ಅದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ.

e) ಉತ್ತರ ಪತ್ರಿಕೆಯನ್ನು ಸ್ಕ್ಯಾನಿಂಗ್ ಮಾಡಿಸಿ ಗಣಕ ಯಂತ್ರದ ಮುಖೇನ ಅರ್ಹತಾ ಪಟ್ಟಿಯನ್ನು ಸಿದ್ದಪಡಿಸುವುದರಿಂದ ಅಭ್ಯರ್ಥಿಗಳು ಉತ್ತರ ಪತ್ರಿಕೆಯ ಮಾಹಿತಿಯನ್ನು ಭರ್ತಿ ಮಾಡುವ ಸಲುವಾಗಿ ಪರೀಕ್ಷೆಗೆ ನಿಗದಿಪಡಿಸಿರುವ ಸಮಯಕ್ಕಿಂತ ಅರ್ಧ ಗಂಟೆ ಮುಂಚಿತವಾಗಿ ಪರೀಕ್ಷಾ ಕೊಠಡಿಗೆ ತಪ್ಪದೇ ಹಾಜರಾಗತಕ್ಕದ್ದು. ಆ ಸಮಯದಲ್ಲಿ ಪರೀಕ್ಷಾ ಮೇಲ್ವಿಚಾರಕರು ಕೆಲವು ಮಾರ್ಗ ಸೂಚನೆಗಳನ್ನು ನೀಡುತ್ತಾರೆ.

f) ಪರೀಕ್ಷೆ ಮುಗಿದ ಒಂದು ಅಥವಾ ಎರಡು ದಿನಗಳ ನಂತರ Provisional Answer Key ಉತ್ತರಗಳನ್ನು ವೆಬ್‌ಸೈಟ್ ನಲ್ಲಿ ಹಾಗೂ ಸಂಬಂಧಪಟ್ಟ ಘಟಕಗಳಲ್ಲಿ ಪ್ರಕಟಿಸಲಾಗುವುದು. ಅಭ್ಯರ್ಥಿಗಳು ಉತ್ತರಗಳ ಬಗ್ಗೆ ಏನಾದರೂ ಆಕ್ಷೇಪಣೆಗಳು ಇದಲ್ಲಿ ಅದಕ್ಕೆ ಒಂದು ವಾರದ